ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ (ವಿ)
ಕಾ ಮತ್ತು ಪಾ ಉಪವಿಭಾಗ,
ಚಾವಿಸನಿನಿ, ಬನ್ನೂರು.
ದೂರವಾಣಿ: 08227-275506/275507
Email ID : cescbannur@gmail.com

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Office of The Asst Executive Engineer(E)
O&M Sub Division, CESC, Bannur
Ph No: 08227-275506/275507
Website: www.cescmysore.org.
Email ID: aeebannur@cescmysore.org.

Company Identity Number [CIN]:- U40109KA2004SGC035177

ದಿನಾಂಕ 18.11.2021 ರಂದು ಬೆಳಿಗ್ಗೆ 11.00 ಗಂಟೆಗೆ **ಕಾರ್ಯನಿರ್ವಾಹಕ ಇಂಜಿನಿಯರ್** (ವಿ) ಕಾ ಮತ್ತು ಪಾ ವಿಭಾಗ, ನಂಜನಗೂಡು ರವರ ಅಧ್ಯಕ್ಷತೆಯಲ್ಲಿ ಬನ್ನೂರು ಉಪ–ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.**

| | |
|---|---|
| ಶ್ರೀ ಪ್ರದೀಪ್.ಟಿ | ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ನಂಜನಗೂಡು. |
| ಶ್ರೀ ಸುಕುಮಾರ ರಾಜು ಬಸವರಾಜು | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ಉಪವಿಭಾಗ, ಬನ್ನೂರು |
| ಶ್ರೀ ಹೇಮಚಂದ್ರ ಜೆ | ಸ.ಇಂ (ವಿ) ಬನ್ನೂರು ಪಟ್ಟಣ ಶಾಖೆ ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ವಿನೋದ್ ಕುಮಾರ್ | ಸ.ಇಂ (ವಿ) ತುಂಬಲ ಶಾಖೆ, ಮತ್ತು ಕೇತುಪುರ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ಯೋಗೇಶ್ ಸಿ. | ಕಿ.ಇಂ (ವಿ) ಪ್ರಭಾರ, ಚಾಮನಹಳ್ಳಿ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ಮಲ್ಲಿಕಾರ್ಜುನ ಕೋರಿ | ಕಿ.ಇಂ (ವಿ) ಪ್ರಭಾರ, ಮಾದಿಗಹಳ್ಳಿ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |

ಸಹಾಯಕ ಇಂಜಿನಿಯರ್ (ವಿ), ಆದ ಶ್ರೀ ಹೇಮಚಂದ್ರ ಜೆ , ರವರು ಹಾಜರಿದ್ದ ಅಧಿಕಾರಿ / ನೌಕರರುಗಳನ್ನು, ರೈತ ಮುಖಂಡರು, ರೈತರು ಹಾಗೂ ವಿದ್ಯುತ್ ಗ್ರಾಹಕರನ್ನು ಸಭೆಗೆ ಸ್ವಾಗತಿಸಿದರು.

ದಿನಾಂಕ : 27.08.2021 ನಡೆದ ಜನ ಸಂಪರ್ಕ ಸಭೆಯಲ್ಲಿ ಸ್ವೀಕರಿಸಿದ ದೂರುಗಳ ಬಗ್ಗೆ ಮಾನ್ಯ **ಕಾರ್ಯನಿರ್ವಾಹಕ ಇಂಜಿನಿಯರ್ (ವಿ),** ರವರು ಕೂಲಂಕುಷವಾಗಿ ಪರಿಶೀಲಿಸಿ, 19 ದೂರುಗಳಲ್ಲಿ 13 ದೂರುಗಳನ್ನು ಸರಿಪಡಿಸಲಾಗಿದ್ದು ಮತ್ತು 06 ದೂರುಗಳನ್ನು ಶೀಘ್ರವಾಗಿ ಸರಿಪಡಿಸಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಉಪವಿಭಾಗಾಧಿಕಾರಿಯವರಿಗೆ ಮತ್ತು ಶಾಖಾಧಿಕಾರಿಗಳಿಗೆ ಸೂಚಿಸಿದರು. ನಂತರ ಸಭೆಯಲ್ಲಿ ಹಾಜರಿದ್ದ ರೈತಮುಖಂಡರು, ರೈತರು, ಗ್ರಾಹಕರು ಮತ್ತು ಸಾರ್ವಜನಿಕರಿಂದ ಮೌಖಿಕವಾಗಿ/ಲಿಖಿತವಾಗಿ ದೂರುಗಳನ್ನು ಸ್ವೀಕರಿಸಲಾಯಿತು.



Scanned with CamScanner

**ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.**

| ಕ್ರ. ಸಂ | ದೂರುದಾರರ ವಿವರ | ವಿಷಯ | ಕ್ರಮ |
|---|---|---|---|
| 1. | ಶ್ರೀ ಶಿವನಂಜು ಅತ್ತಹಳ್ಳಿ 8722078348 | 1. ಎಂ. ಶಿವಕುಮಾರ್ ಮತ್ತು ಇತರರು ತಮ್ಮ ಜಮೀನಿನ ಕೊಳವೆ ಬಾವಿ ಕೊರೆಸಿದ್ದು, ಅಕ್ರಮ ಸಕ್ರಮ ಅಡಿಯಲ್ಲಿ ಹಣ ಪಾವತಿಸಿದ್ದು, ಅದಕ್ಕೆ 8–9 ಜನರ ಸಂಪರ್ಕ ಅವಲಂಬಿತರಾಗಿರುವ ಕಾರಣ ಮಂಜೂರಾಗಿರುವ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಮನವಿ ಸಲ್ಲಿಸಿದರು.(526/18.11.2021).<br>2. ನಂಜುಂಡೇಗೌಡ ಮತ್ತು ಇತರರು ನುಗ್ಗಹಳ್ಳಿಕೊಪ್ಪಲು ಮತ್ತು ಯಾಚೇನಹಳ್ಳಿ ಗ್ರಾಮಸ್ಥರು ತಮ್ಮ ಜಮೀನಿನ ಕೊಳವೆ ಬಾವಿ ಕೊರೆಸಿದ್ದು, ಅಕ್ರಮ ಸಕ್ರಮ ಅಡಿಯಲ್ಲಿ ಹಣ ಪಾವತಿಸಿದ್ದು, ಅದಕ್ಕೆ 8–9 ಜನರ ಸಂಪರ್ಕ ಅವಲಂಬಿತರಾಗಿರುವ ಕಾರಣ, ಹೆಚ್ಚುವರಿ ಪರಿವರ್ತಕವನ್ನು ಮಂಜೂರು ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ. (527/18.11.2021).<br>3. ಪುಟ್ಟರಾಜು ಮತ್ತು ಇತರರು ಬನ್ನೂರು ಪಟ್ಟಣ, ಬೀಡನಹಳ್ಳಿ, ನುಗ್ಗಹಳ್ಳಿಕೊಪ್ಪಲು ಹಾಗು ಯಾಚೇನಹಳ್ಳಿ ಗ್ರಾಮಸ್ಥರು ಹೆಚ್ಚುವರಿ ಪರಿವರ್ತಕವನ್ನು ಮಂಜೂರು ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ. (528/18.11.2021).(ಕಾರ್ಯದೇಶ ಸಂಖ್ಯೆ: W-168/04.05.2021, W-167/04.05.2021, V-199/29.03.2021, V-179/02.02.2021, U24740/20.03.2020 | ಬನ್ನೂರು ಪಟ್ಟಣಕೇತುಪುರ ಮತ್ತು ಚಾಮನಹಳ್ಳಿ ಶಾಖಾಧಿಕಾರಿಗಳಿಗೆ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು |
| 2. | ಶ್ರೀ ನಾರಾಯಣ ಬನ್ನೂರು 7353103873 | 1. ವಿಳಂಬವಾಗುತ್ತಿರುವ ಕಾಮಗಾರಿಯನ್ನು ಬೇಗನೇ ನಿರ್ವಹಿಸಲು ಕ್ರಮಕೈಗೊಳ್ಳುವಂತೆ ಕೋರಿದರು<br>2. ಎಲ್.ಟಿ–7 ಜಕಾತಿಯ ಸಂಪರ್ಕದ ಪ್ರತಿ ಯೂನಿಟ್ ಬೆಲೆಯೂ ಹೆಚ್ಚಾಗಿದ್ದು ಇದನ್ನು ಕಡಿಮೆಗೊಳಿಸುವಂತೆ ಕೋರಿದರು ಹಾಗೂ ಎಂ.ಎಸ್.ಡಿ ಹಣವನ್ನು 28 ದಿನಗಳ ನಂತರ ಪಾವತಿಸಿಕೊಳ್ಳುತ್ತಿರುವ ಕಾರಣ ಗ್ರಾಹಕರ ಮೇಲೆ ಅಧಿಕ ಆರ್ಥಿಕ ಹೊರೆ ಬೀಳುತ್ತಿರುವುದಾಗಿ ತಿಳಿಸಿದರು. | ಸ.ಕಾ.ಇಂ(ವಿ) ರವರಿಗೆ ಈ ಬಗ್ಗೆ ಗ್ರಾಹಕರ ಮನವಿಯನ್ನು ವಿಭಾಗ ಕಛೇರಿಗೆ ಸಲ್ಲಿಸಲು ಸೂಚಿಸಿದರು. |
| 3. | ಶ್ರೀ ಹೊಂಬೇಗೌಡ ಮಾರಗೌಡನಹಳ್ಳಿ 9535547478 | ತಮ್ಮ TBMP-244 -Rs 2,59,000/- ರಾಗಿಮಿಲ್ ಸ್ಥಾವರಕ್ಕೆ ಬಿ.ಬಿ.ಸಿ ಅನ್ನು ಬೇಡಿಕೆಮಾಡಿದ್ದು ಈ ಮೊತ್ತವನ್ನು ಒಂದೇ ಸಲ ಪಾವತಿಮಾಡುವಂತೆ ಒತ್ತಾಯ ಮಾಡುತ್ತಾರೆಂದು ದೂರಿದರು. | ಹಿರಿಯ ಸಹಾಯಕರಿಗೆ ಬಿ.ಬಿ.ಸಿ ಹಿಂಬಿಲ್ಲನ್ನು ನೀಡಿ ಸದರಿಯವರಿಗೆ ವಿವರಿಸಲು ಸೂಚಿಸಿದರು. ಆಡಿಟ್ ಮಾಡಿಸಲು ಸೂಚಿಸಿದರು |



Scanned with CamScanner

| | | | |
|---|---|---|---|
| 4. | ಶ್ರೀ ಬಿ.ಆರ್ ಶ್ರೀನಿವಾಸ, ಬನ್ನೂರು ಪಟ್ಟಣ 7892528714 | ಪರಿವರ್ತಕಗಳನ್ನು ಬನ್ನೂರು ಉಪವಿಭಾಗಕ್ಕೆ ಹಂಚಲು ಕಾರ್ಯನಿರ್ವಾಹಕ ಇಂಜಿನಿಯರ್ ರವರಿಗೆ ಕೋರಿದರು ಹಾಗು ಕಾರ್ಯದೇಶ ಸಂಖ್ಯೆ V-216, V-217, V-/30.03.2021 ವಿಳಂಬವಾಗಿರುವ ಬಗ್ಗೆ ಮಾಹಿತಿ ಕೋರಿದರು | UNIP ಯೋಜನೆಯಡಿಯಲ್ಲಿನ ಕಾಮಗಾರಿಗಳಿಗೆ ನೀಡಲು ಹೊಸ 25 ಕೆ.ವಿ.ಎ ಪರಿವರ್ತಕಗಳ ಕೊರತೆ ಇದ್ದು, ಶೀಘ್ರದಲ್ಲಿ ಕಾಮಗಾರಿ ಮುಗಿಸಲು ಸೂಕ್ತಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. |
| 5. | ಶ್ರೀ ಕೇಶವ ಮೂರ್ತಿ ಬಿನ್ ವೆಂಕಟೇಗೌಡ, ಮಾಕನಹಳ್ಳಿ 9900876203 | ದಿನಾಂಕ 307/02.06.2021 ರಂದು ಟಪಾಲು ಶಾಖೆಗೆ ಅರ್ಜಿ ಸಲ್ಲಿಸಿದ್ದು ಸದರಿ ಕಾರ್ಯ ಪೂರ್ಣಗೊಳ್ಳದಿರುವ ಬಗ್ಗೆ ವಿಚಾರಿಸಿದರು | ಶಿಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸುವುದಕ್ಕೆ ಕ್ರಮ ಕೈಗೊಳ್ಳುವಂತೆ ಬನ್ನೂರು ಪಟ್ಟಣ ಶಾಖಾಧಿಕಾರಿಗಳಿಗೆ ಸೂಚಿಸಿದರು |
| 6. | ಶ್ರೀ ಗೋಪಿ ಕೃಷ್ಣ, ಬಿ.ಬೆಟ್ಟಹಳ್ಳಿ 9945752891 | 1. ಎಲ್.ಟಿ–1 ಭಾಗ್ಯ / ಕುಠೀರ ಜ್ಯೋತಿ ಸ್ಥಾವರಗಳ ಬೇಡಿಕೆ ,ವಸೂಲಾತಿ, ಸರ್ಕಾರದ ಸಹಾಯ ಧನ ಇವುಗಳ ಸಂಪೂರ್ಣ ಮಾಹಿತಿಯನ್ನು ಕೋರಿದರು<br>2. ಜನ ಸಂಪರ್ಕ ಸಭೆ ನಡೆಯುವ ಬಗ್ಗೆ ಸಾಮಾನ್ಯ ಜನರಿಗೆ ವಿಚಾರ ತಿಳಿಯುವಂತೆ ಕ್ರಮ ಕೈಗೊಳ್ಳಲು ಮನವಿ ಮಾಡಿದರು | ಹಿರಿಯ ಸಹಾಯಕರಿಗೆ ವಿವರ ನೀಡಲು ಸೂಚಿಸಿದರು.<br>ಪ್ರತಿ ಬಾರಿ ದಿನ ಪತ್ರಿಕೆಗಳಲ್ಲಿ ಮಾಹಿತಿ ನೀಡಲಾಗುತ್ತಿದೆ ಎಂದು ತಿಳಿಸಿದರು |
| 7. | ಶ್ರೀ ಜಗದೀಶ್ ಹನುಮನಾಳು 9008231695 | ಪವರ್ ಮ್ಯಾನ್ ರವರುಗಳು ಪ್ರತಿ ದಿನ ಯಾವ ಯಾವ ಕಾರ್ಯವನ್ನು ನಿರ್ವಹಿಸಿದ್ದಾರೆ ಮತ್ತು ಅವರ ಕಾರ್ಯವೈಖರಿ ದಿನಚರಿ ಬಗ್ಗೆ ವಿವರ ಕೋರಿದರು | ಶಾಖಾಧಿಕಾರಿಗಳಿಗೆ ವಿವರವನ್ನು ನೀಡಲು ತಿಳಿಸಿದರು. |
| 8. | ಶ್ರೀಮತಿ ಶಾರದಮ್ಮ ಅತ್ತಹಳ್ಳಿ | ತಮ್ಮ ಮನೆಗೆ ಪ್ರತಿ ಮಾಹೆಯಲ್ಲಿ ವಿದ್ಯುತ್ ಬಿಲ್ ವಿತರಿಸದೇ ಇರುವುದು ಹಾಗೂ ಒಂದೇ ಸಲ ಅತ್ಯಧಿಕ ವಿದ್ಯುತ್ ಬಿಲ್ ವಿತರಿಸಿದ್ದಾರೆಂದು ದೂರಿದರು | ಸ.ಕಾ.ಇಂ(ವಿ) ರವರಿಗೆ ಅತ್ತಹಳ್ಳಿ ಗ್ರಾಮ ವಿದ್ಯುತ್ ಪ್ರತಿನಿಧಿಯನ್ನು ಬದಲಾಯಿಸಲು ತಿಳಿಸಿದರು. |
| 9. | ಶ್ರೀ ರಘು ಮತ್ತು ಶ್ರೀ ನಂಜುಂಡಸ್ವಾಮಿ ನುಗ್ಗಳ್ಳಿಕೊಪ್ಪಲು 9743129321 | ಕಾಲುವೆ ನೀರು ಮುಗಿದು ಹೋಗುವುದರೊಳಗೆ ಹೊಸ ಟಿ.ಸಿ ಗಳನ್ನು ಅಳವಡಿಸಿಕೊಡುವಂತೆ ಕೋರಿದರು | UNIP ನಲ್ಲಿ ವಿದ್ಯುತ್ ಸಂಪರ್ಕ ಪಡೆಯುವಂತೆ ತಿಳಿಸಿದರು |
| 10. | ಶ್ರೀ ಕುಮಾರ್ ಬೀಡನಹಳ್ಳಿ 9741733676 | ಹೊಸ 25 ಕೆವಿಎ ಟಿ.ಸಿ ಅಂದಾಜುಪಟ್ಟಿ ಸಿದ್ದವಾಗಿದ್ದು ಸದರಿ ಅಂದಾಜು ಪಟ್ಟಿಗೆ ಕಾರ್ಯದೇಶ ವಾಗಿರುವುದಿಲ್ಲ ಮತ್ತು ಟಿ.ಸಿ ನೀಡಿರುವುದಿಲ್ಲವೆಂದು ದೂರಿದರು | ಮಾದಿಗಹಳ್ಳಿ ಶಾಖಾಧಿಕಾರಿಗಳಿಗೆ ಕಾರ್ಯದೇಶ ಪಡೆಯುವಂತೆ ತಿಳಿಸಿದರು |
| 11. | ಶ್ರೀ ಕೃಷ್ಣೇಗೌಡ ಮಾರೇಗೌಡನಹಳ್ಳಿ 9008965036 | ಟಿ.ಸಿ ಗಳಿಗೆ ಆಯಲ್ ಕಡಿಮೆಗೊಂಡಾಗ ಅದಕ್ಕೆ ಆಯಲ್ ನ್ನು ತುಂಬಿಸುವ ಬಗ್ಗೆ ವಿವರ ಕೋರಿದರು | ಕಾ.ನಿ ಇಂ(ವಿ) ರವರು ಪರಿವರ್ತಕಗಳಿಗೆ ತೈಲವನ್ನು ಇಲಾಖೆಯಿಂದ ತುಂಬಿಸಲಾಗುವುದು ಎಂದು ತಿಳಿಸಿದರು |
| 12. | ಶ್ರೀ ಜಯರಾಮು ಬಸವನಹಳ್ಳಿ 8951677375 | ತಮ್ಮ ಜಮೀನಿನ ಮನೆಯ ಮುಂಭಾದ ವಿದ್ಯುತ್ ವೈಯರ್ ದೊಳ್ಳಾಗಿದ್ದು ಇದನ್ನು ಸರಿಪಡಿಸಿಕೊಡುವಂತೆ ಮನವಿ ಮಾಡಿದರು | ಚಾಮನಹಳ್ಳಿ ಶಾಖಾಧಿಕಾರಿಗಳಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು |
| 13. | ಕಗ್ಗಲೀಪುರ ಮತ್ತು ವ್ಯಾಸರಾಜಪುರ ಗ್ರಾಮಸ್ಥರು | 13 ಮಂದಿ ತಮ್ಮ ಮನೆಗಳಿಗೆ ಬೆಳಕು ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಕೋರಿ ತಮ್ಮ ಪಡಿತರ ಮತ್ತು ಇತರೆ ದಾಖಲೆಗಳನ್ನು ಸಲ್ಲಿಸಿರುತ್ತಾರೆ. | ಸ.ಕಾ.ಇಂ(ವಿ) ರವರಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |



Scanned with CamScanner

| | | | |
|---|---|---|---|
| 14. | ಶ್ರೀ ಸಿದ್ದೇಗೌಡ ಬೀಡನಹಳ್ಳಿ 9741733676 | ಬೀಡನಹಳ್ಳಿ ಗ್ರಾಮದ ಕೆಲವು ಭಾಗಗಳಲ್ಲಿ ನೀಲಗಿರಿ ಮರಗಳು ವಿದ್ಯುತ್ ಕಂಬಕ್ಕೆ ಹೊಂದಿಕೊಂಡಂತೆ ಇದ್ದು ಇವುಗಳಿಂದ ವಿದ್ಯುತ್ ಅಡೆಚಣೆ ಉಂಟಾಗುತ್ತಿದ್ದು ಸದರಿ ಮರಗಳನ್ನು ತೆರವುಗೊಳಿಸುವಂತೆ ಮನವಿ ಮಾಡಿದರು | ಮಾದಿಗಹಳ್ಳಿ ಶಾಖಾಧಿಕಾರಿಗಳಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಕಾ ಮತ್ತು ಪಾಲನಾ ಉಪವಿಭಾಗ, ಚಾ.ವಿ.ಸ.ನಿ.ನಿ.
ಬನ್ನೂರು

ಕ್ರಮ ಸಂಖ್ಯೆ : ಸ.ಕಾ.ನಿ (ವಿ)/ಸಇಂ(ತಾ)/2021–22/1684–93 ದಿನಾಂಕ : 20.11.2021

ಪ್ರತಿಗಳು.

- ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕ ಇಂಜಿನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ., ನಂಜನಗೂಡು, ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು/ ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ.



Scanned with CamScanner